ಅ) ಬಸವ ಕಲ್ಯಾಣದ ಅರಿವಿನ ಮನೆ, ಪ್ರಭುದೇವರ ಗದ್ದುಗೆ ಅಕ್ಕನಾಗಮ್ಮನ ಗುಹೆ ಮೊದಲಾದ ಸ್ಥಳಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ ಈ ಸ್ಥಳಗಳ ದುರಸ್ಥಿಗಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಯಾವುವು

ಶ್ರೀ ಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ಹೌದು

ಆ) ಬಸವ ಕಲ್ಯಾಣ ಕ್ಷೇತ್ರದ ಅಭಿವೃದ್ಧಿಗಾಗಿ ಸಮಿತಿಯನ್ನು ರಚಿಸುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ. ಸಮಿತಿಯ ರಚನೆಯಾದ ನಂತರ ಬಸವ ಕಲ್ಯಾಣ ಅಭಿವೃದ್ಧಿ ಬಗ್ಗೆ ಪರಿಶೀಲಿಸಲಾಗುವುದು.

ರಾಷ್ಟ್ರೀಯ ಹೆದ್ದಾರಿಗಳ ಗುಣಮಟ್ಟ

1267 (1502) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ರಾಜ್ಯದ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳ ಗುಣಮಟ್ಟಕ್ಕೆ ವಿಸ್ತರಿಸಲು ನಿರ್ಧರಿಸಾಗಿದೆಯೇ; ಹಾಗಿದ್ದಲ್ಲಿ ಸದರಿ ಮಾರ್ಗಗಳು ಯಾವುವು?

ಆ) ಈ ಕಾರ್ಯ ಎಂದಿನಿಂದ ಪ್ರಾರಂಭವಾಗಿದೆ; ಇದಕ್ಕೆ ಮೀಸಲಿಟ್ಟಿರುವ ಹಣ ಎಷ್ಟು; ಇದುವರೆಗೆ ಬಿಡುಗಡೆ ಮಾಡಿರುವ ಹಣ ಎಷ್ಟು;

ಇ) ಈ ಕಾಮಗಾರಿ ಎಂದು ಪೂರ್ಣಗೊಳ್ಳುವುದು?

ಶ್ರೀ ಧರಮ್ ಸಿಂಗ್ (ಲೋಕೋಪಯೋಗಿ ಸಚಿವರು)

ಅ) ರಾಜ್ಯದ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳ ಗುಣಮಟ್ಟಕ್ಕೆ ವಿಸ್ತರಿಸಲು ಸದ್ಯಕ್ಕೆ ನಿರ್ಧರಿಸಿರುವುದಿಲ್ಲ. ವಿಶ್ವಬ್ಯಾಂಕ್ ಧನ ಸಹಾಯದಲ್ಲಿ ಹಾಗೂ ಮುಖ್ಯಮಂತ್ರಿಗಳ ನೇರವಿನಲ್ಲಿ ಆಯ್ದ ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ.

ಆ) ವಿಶ್ವಬ್ಯಾಂಕ್ ಧನ ಸಹಾಯದಲ್ಲಿ ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸುವ ಕಾರ್ಯ 2000-2001ನೇ ಸಾಲಿನ ಅಂತ್ಯಕ್ಕೆ ಪ್ರಾರಂಭಿಸಲು ಯೋಜಿಸಿದೆ. ಸುಮಾರು 966.00 ಕೋಟಿ ರೂ.ಗಳು ಮೊದಲನೇ ಹಂತದಲ್ಲಿ ವೆಚ್ಚ ಮಾಡಲಾಗುವುದು. ಮುಖ್ಯಮಂತ್ರಿ ಸಹಾಯಧನದಲ್ಲಿ 540.00 ಕೋಟಿ ರೂ.ಗಳ ವೆಚ್ಚದಲ್ಲಿ ನಾಲ್ಕು ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸಲು ಯೋಚಿಸಲಾಗಿದೆ.

ಇ) ವಿಶ್ವಬ್ಯಾಂಕ್ ಧನ ಸಹಾಯ ಮೊದಲನೇ ಹಂತದ ಕಾಮಗಾರಿಗಳು ಐದು ವರ್ಷಗಳಲ್ಲಿ ಮುಗಿಸಲಾಗುವುದು. ಮುಖ್ಯಮಂತ್ರಿ ನೇರವಿನ ಕಾಮಗಾರಿಗಳನ್ನು ಐದು ವರ್ಷಗಳಲ್ಲಿ ಮುಗಿಸಲಾಗುವುದು.